**ದಿನಾಂಕ 29.11.2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಹೆಚ್.ಎನ್. ವಕೀಲರಿಂದಃ**

1. FDP ಆದೇಶದ ಪ್ರಕಾರ ವಾದಿಗೆ ಖಾತೆಯು ಸರ್ವೆ ನಂ.74/2(ಎ) ಎಂದು ಆಗಿದ್ದು, ಪ್ರತಿವಾದಿಗಳಿಗೆ ಸರ್ವೆ ನಂ.74/8 ಎಂದು ಪೋಡಾಗಿದೆ ಎಂದರೆ ಸರಿ. ಪ್ರತಿವಾದಿಗಳು ಅವರ ಆಸ್ತಿಯಲ್ಲಿ ಮನೆಯನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸರಿ, ಅವರು ಸುಮಾರು 20-25 ವರ್ಷಗಳ ಹಿಂದೆ ಕಟ್ಟಿದ್ದಾರೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಮುಂಚೆ ಭಾಗ ಆಗುವ ಮೊದಲು ಅವರ ಹೆಸರಿನಲ್ಲಿ ಇತ್ತು ನಂತರ ಭಾಗ ಮಾಡಿಕೊಂಡಿದ್ದೇವೆ. ದಾವಾ ಐಟಂ ನಂ.2 ನ್ನು ಹೊರತುಪಡಿಸಿ FDP ಆದೇಶದಂತೆ ಉಳಿದ ಎಲ್ಲಾ ಆಸ್ತಿಗಳಿಗೂ ಅವರವರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. FDP ಪ್ರಕಾರ ವಾದಿಯರಿಗೆ 5 ಸರ್ವೆ ನಂಬರ್ ಆಸ್ತಿ ಬಂದಿದೆ. ಸದರಿ 5 ಸರ್ವೆ ನಂಬರ್ ಗಳ ಆಸ್ತಿ ಬಂದ ನಂತರ ಲಕ್ಷ್ಮಮ್ಮನವರ ಕಡೆಯಿಂದ ನಮ್ಮ ತಂದೆ ಮತ್ತು ಚಿಕ್ಕಪ್ಪನವರು ಸರ್ವೆ ನಂ. 178/4 ರ ಜಮೀನನ್ನು ಅವರ ಹೆಸರಿಗೆ ಬರೆಸಿಕೊಂಡಿದ್ದಾರೆ ಎಂದರೆ ಬರೆಸಿಕೊಂಡಿಲ್ಲ ಬದಲಾಗಿ ಕ್ರಯಕ್ಕೆ ತೆಗೆದುಕೊಂಡಿರುತ್ತಾರೆ ಅವರು ಎಷ್ಟು ರೂಪಾಯಿಗಳಿಗೆ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಚಿಕ್ಕೀರಪ್ಪನವರ ಕುಟುಂಬಕ್ಕೆ ಆಸ್ತಿ ಹೋಗುವುದನ್ನು ತಡೆಯಲು ಲಕ್ಷ್ಮಮ್ಮನವರ ಮೇಲೆ ಪ್ರಭಾರ ಬೀರಿ ನಮ್ಮ ತಂದೆ ಮತ್ತು ಚಿಕ್ಕಪ್ಪನವರು ಈ ರೀತಿ ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

2. ಅನಂತಮ್ಮ ಕೋಂ ಗಂಗಣ್ಣ ಎನ್ನುವವರಿಗೆ ನಮ್ಮ ತಂದೆ ಮತ್ತು ಚಿಕ್ಕಪ್ಪನವರು ಮುಂದೆ ನಿಂತುಕೊಂಡು ಸರ್ವೆ ನಂ.149/3 ರ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸರ್ವೆ ನಂ. 6/3 ರ ಆಸ್ತಿಯನ್ನು ನಮ್ಮ ತಂದೆ ಮತ್ತು ಚಿಕ್ಕಪ್ಪನವರು ಮುಂದೆ ನಿಂತುಕೊಂಡು ಎನ್.ಶಿವರುದ್ರಯ್ಯ ಬಿನ್ ಲೇ.ನಂಜುಂಡಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅದನ್ನು ನಮ್ಮ ಅಜ್ಜಿ ಲಕ್ಷ್ಮಮ್ಮನವರೇ ಮಾರಾಟ ಮಾಡಿರುತ್ತಾರೆ. ಸದರಿ ಆಸ್ತಿಯನ್ನು ದಾವೆ ಬಾಕಿ ಇದ್ದಾಗಲೇ ಮಾರಾಟ ಮಾಡಲಾಗಿದೆ ಎಂದರೆ ಸಾಕ್ಷಿಯು ಅದಕ್ಕೆ ಯಾವುದೇ ಸಮಸ್ಯೆ ಇಲ್ಲದ ಕಾರಣ ಮಾರಾಟ ಮಾಡಲಾಗಿದೆ ಎಂದು ನುಡಿಯುತ್ತಾರೆ.

3. ಸರ್ವೆ ನಂ.178/4, 149/3 ರ ಆಸ್ತಿಗಳನ್ನು ದಾವೆ ಹಾಕುವ ಸ್ವಲ್ಪ ದಿನಗಳ ಮೊದಲು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಎರಡು ಸರ್ವೆ ನಂಬರ್ ಗಳಿಗೆ ಮಾತ್ರ ತೊಂದರೆ ಮಾಡಿದ್ದಾರೆ ಮತ್ತು ಉಳಿದಂತೆ ಯಾವುದೇ ತೊಂದರೆ ಇಲ್ಲ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ಸರ್ವೆ ನಂ. 74/2(ಎ) ರ ಆಸ್ತಿಯನ್ನು ಟೋಲ್ ಪ್ಲಾಸಾ ಗಾಗಿ ಸ್ವಾಧೀನ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯು ಎನ್ನು 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆಯು ಮುಂದುವರೆದಿದ್ದು ದಾವೆಯೂ ಕೂಡ ಹಾಕಿದ್ದರು ಎಂದು ನುಡಿಯುತ್ತಾರೆ. ನಮ್ಮ ಅಜ್ಜಿಗೆ 2 ಎಕರೆಯಲ್ಲಿ ಭಾಗ ಕೊಡದೆ ಅದು ಅಸಲು ದಾವಾ ಸಂಖ್ಯೆ 175/88 ಆಗಿತ್ತು.

4. ಇತ್ತೀಚಿಗೆ ಸದರಿ ಟೋಲ್ ಪ್ಲಾಜಾವನ್ನು ಕರೆಜವನಹಳ್ಳಿಯಲ್ಲಿ ಸ್ಥಾಪನೆ ಮಾಡಲಾಗಿದೆ ಎಂದರೆ ಸರಿ. ಕರೆಜವನಹಳ್ಳಿಯ ಗೇಟ್ ಬಳಿ ಟೋಲ್ ಪ್ಲಾಜಾವನ್ನು ಸ್ಥಾಪನೆ ಮಾಡಿರುವ ಕಾರಣ ಸರ್ವೆ ನಂ. 74/2(ಎ) ರ ಆಸ್ತಿಯನ್ನು ಸ್ವಾಧೀನ ಮಾಡದೇ ಕೈಬಿಟ್ಟಿದ್ದಾರೆ ಎಂದರೆ ಸರಿಯಲ್ಲ. 9 ಗುಂಟೆ ಜಮೀನನ್ನು ಮಾತ್ರ ಸ್ವಾಧೀನ ಮಾಡಿಕೊಂಡಿದ್ದು ಉಳಿದ 2 ಗುಂಟೆಯನ್ನೂ ಸಹ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದ್ದು ಒಟ್ಟು 11 ಗುಂಟೆ ಸ್ವಾಧೀನವಾಗಿದೆ ಎಂದು ದಾಖಲಾತಿಗಳು ಇವೆ. ಸದರಿ ಟೋಲ್ ಪ್ಲಾಜಾವನ್ನು ಕರೆಜವನಹಳ್ಳಿಯಲ್ಲಿ ಸ್ಥಾಪನೆ ಮಾಡಲಾದ ಕಾರಣ ಸರ್ವೆ ನಂ. 74/2(ಎ) ರ ಆಸ್ತಿಯನ್ನು ಸ್ವಾಧೀನ ಮಾಡದೇ ಕೈಬಿಟ್ಟಿದ್ದಾರೆ ಎಂದರೆ ಸರಿಯಲ್ಲ. ಪರಿಹಾರವನ್ನು 1 ನೇ ಪ್ರತಿವಾದಿ ಮಾತ್ರ ತೆಗೆದುಕೊಂಡಿಲ್ಲ ವಾದಿಯೂ ಸಹ ಪಡೆದಿದ್ದಾರೆ ಎಂದರೆ ಸರಿಯಲ್ಲ. ಚಿತ್ರದುರ್ಗದಲ್ಲಿ ವಾದಿ ಮತ್ತು 1 ನೇ ಪ್ರತಿವಾದಿ ಯಾ ಅಧಿಕಾರಿಯನ್ನು ಭೇಟಿ ಮಾಡಿ ಹಣವನ್ನು ಹಂಚಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅದೇ ಕಾರಣದಿಂದ FDP 12/2012 ರ ದಾವೆಯೂ ರಾಜಿ ಮಾಡಿಕೊಳ್ಳುವ ಸಮಯದಲ್ಲಿ ನಮ್ಮಿಬ್ಬರ ಮಧ್ಯೆ ಯಾವುದೇ ಕೇಸು ಬಾಕಿ ಇಲ್ಲ ಮತ್ತು ಯಾವುದೆ ಫಸಲು ನಷ್ಟ ಕೇಳುವುದಿಲ್ಲ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಮಗೂ ಮತ್ತು 1 ನೇ ಪ್ರತಿವಾದಿಗೂ ತಲಾ ಅರ್ಧ ಭಾಗ ಎಂದು ನಮ್ಮಅಜ್ಜಿಗೆ ಹೇಳಿ ಅವರ ಸಹಿಯನ್ನು ಪಡೆದುಕೊಂಡಿದ್ದು ಮೊದಲು ಹೇಗೆ ಭಾಗ ಮಾಡಿಕೊಂಡಿದ್ದೀರೋ ಅದೇ ರೀತಿ ಭಾಗ

ಮಾಡಿಕೊಡಲಾಗುತ್ತದೆ ಎಂದು ಹೇಳಿದ್ದು ಎರಡು ಸರ್ವೆ ನಂಬರ್ ಗಳಿಗೆ ಮಾತ್ರ ತೊಂದರೆ ಮಾಡಿದ್ದು ಉಳಿದ ಮೂರು ಸರ್ವೆ ನಂಬರ್ ಗಳಲ್ಲಿ ಸರಿಯಾದ ಪಾಲು ಕೊಟ್ಟಿರುತ್ತಾರೆ.

5. FDP ಆದೇಶದಂತೆ ಲೆವೆನಿ ಸ್ಕೆಚ್ ನ್ನು ಮಾಡಿಕೊಳ್ಳಲು ದಾವಾ ಸ್ವತ್ತಿಗೆ ಅರ್ಜಿ ಸಲ್ಲಿಸುವ ಸಮಯದಲ್ಲಿ ವಾದಿ ತಕರಾರು ಸಲ್ಲಿಸಿ ಲೆವೆನಿ ಸ್ಕೆಚ್ ಆಗದಂತೆ ಮಾಡಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಎರಡು ಭಾಗಗಳಾಗಬೇಕು ಎಂದು ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಈಗಲೂ ಸಹ ಲಕ್ಷ್ಮಮ್ಮನವರ ಹೆಸರಿನಲ್ಲಿಯೇ ಖಾತೆ ಮುಂದುವರೆಯುತ್ತಿದೆ ಎಂದರೆ ಸಾಕ್ಷಿಯು ಮಾಡಿಕೊಟ್ಟಿದ್ದಾರೆ ಒಂದುವೇಳೆ ಇಲ್ಲ ಎಂದರೆ ಓಡಾಡಲು ದಾರಿ ಬಿಟ್ಟು ಮಾಡಿಕೊಡುತ್ತಾರೆ ಎಂದು ನುಡಿಯುತ್ತಾರೆ.

6. ವಾದಿಯ ಮನೆಗೆ ಹೋಗಲು ಪ್ರತಿವಾದಿ 1 ರವರಿಗೆ ಹಂಚಿಕೆಯಾಗಿರುವ ಸ್ವತ್ತಿನಲ್ಲಿ ಪೂರ್ವಕ್ಕೆ ಆದಂತೆ 6 ಅಡಿ ರಸ್ತೆ ಇದೆ, ಟ್ರಾಕ್ಟರ್ ಹೋಗುವಷ್ಟು ರಸ್ತೆ ಇದೆ ಅದು ಮಣ್ಣಿನ ರಸ್ತೆಯಾಗಿದೆ. ಒಂದು ವೇಳೆ ರಸ್ತೆ ಇದಿದ್ದೇ ಆದರೆ ರಾಜೀ ಪತ್ರದಲ್ಲಿ ಆ ಬಗ್ಗೆ ನಮೂದು ಮಾಡಲಾಗುತ್ತಿತ್ತು ಎಂದರೆ ಎರಡು ಸರ್ವೆ ನಂಬರ್ ಗಳಿಗೆ ಸರಿಯಾಗಿ ಭಾಗ ಮಾಡದೇ ಇದ್ದ ಕಾರಣವೇ ನಾವು ನ್ಯಾಯಾಲಯಕ್ಕೆ ಬಂದಿದ್ದೇವೆ ಎಂದು ನುಡಿಯುತ್ತಾರೆ. ನಾನು ಹೇಳಿಂದತೆ ರಸ್ತೆಗೆ ಜಾಗವನ್ನು ಬಿಟ್ಟಲ್ಲಿ 1 ನೇ ಪ್ರತಿವಾದಿಗೆ 1 ಗುಂಟೆಯಷ್ಟು ನಷ್ಟ ವಾಗುತ್ತದೆ ಎಂದರೆ ನನಗೆ ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ಇರುವ ನಕ್ಷೆ ಕಾಲ್ಪನಿಕವಾಗಿದ್ದು ಅದಕ್ಕೆ ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ. ವಾದಿ ಲಕ್ಷ್ಮಮ್ಮನವರಾಗಲೀ ಅವರ ಯಜಮಾನರು ಮುದ್ದಣ್ಣನವರಾಗಲೀ ಎಂದಿಗೂ 1 ನೇ ಪ್ರತಿವಾದಿಯ ಜಾಗದಲ್ಲಿ ಓಡಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ಮೊದಲು ಸದರಿ 6 ಗುಂಟೆ ಜಮೀನು ಸಹ ನಮ್ಮ ಅಜ್ಜಿಯ ಹೆಸರಿನಲ್ಲಿ ಇದ್ದು ನ್ಯಾಯಾಲಯದಲ್ಲಿ ಭಾಗವಾದ ನಂತರ ಅದು 3 ಗುಂಟೆ ಅವರ ಭಾಗಕ್ಕೆ ಹೋಗಿದೆ ಎಂದು ನುಡಿಯುತ್ತಾರೆ.

7. ದಾವಾ ಐಟಂ ನಂ. 3 ರ ಚಕ್ಕು ಬಂದಿ ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ನಾನು ಹೇಳು ಪ್ರಕಾರ ಯಾವುದೇ ಜಮೀನು ಇಲ್ಲ, ಅಲ್ಲಿ ಮನೆಗಳನ್ನು ಕಟ್ಟಿ ವಾಸ ಮಾಡುತ್ತಿದ್ದಾರೆ ಮತ್ತು ಪಂಚಾಯತಿಯವರು ಎಲ್ಲಾ ಮೂಲ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದಾರೆ ಎಂದರೆ ರಸ್ತೆ ಇದೆ ಮತ್ತು ಸುತ್ತು ಮನೆ ಇದೆ ಎಂದು ನುಡಿಯುತ್ತಾರೆ. ಜಮೀನು ಎಂದು ಕೊಟ್ಟರೆ

ನ್ಯಾಯಾಲಯದ ಶುಲ್ಕ ಕಡಿಮೆಯಾಗುತ್ತದೆ ಎನ್ನುವ ಕಾರಣಕ್ಕೆ ನಿವೇಶನ ಎಂದು ತೋರಿಸದೇ ಜಮೀನು ಎಂದು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ವಾದಿ ಲಕ್ಷ್ಮಮ್ಮನವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದದ್ದೇ ಆದರೆ ಅವರು ಪರಿಹಾರದ ಹಣವನ್ನು ಸ್ವೀಕರಿಸಿದ ಬಗ್ಗೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಅವರು ನ್ಯಾಯಾಲಯಕ್ಕೆ ಬರುತ್ತಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಮ್ಮ ಮತ್ತು ಮುದ್ದಣ್ಣನವರಿಗೆ ವಾರಸುದಾರರು ಇಲ್ಲದೆ ಇರುವ ಕಾರಣ ಮತ್ತು ಗಂಡನ ಕಡೆಯವರಿಗೆ ಆಸ್ತಿ ಹೋಗಬಾರದು ಎಂದು ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿಸಿ ದಾವಾ ಆಸ್ತಿಗೆ ಸುಳ್ಳು ಕೇಸನ್ನು ಹಾಕಿ ಬಂದಿದ್ದೇವೆ ಎಂದರೆ ಸರಿಯಲ್ಲ.

8. ದಾವಾ ಐಟಂ ನಂ.3 ರ ಆಸ್ತಿಯಲ್ಲಿ ಪ್ರತಿವಾದಿಗಳು ನಮಗೆ ಯಾವುದೇ ತೊಂದರೆ ಮಾಡಿಲ್ಲ ಎಂದರೆ ಸಾಕ್ಷಿಯು ನಮಗೆ 17 ಗುಂಟೆ ಜಮೀನು ಬರಬೇಕಿದ್ದು ಅದನ್ನು ನಮಗೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**